# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೧<br>Part – I | ಬೆಂಗಳೂರು, ಶುಕ್ರವಾರ, ೧೫, ಮೇ, ೨೦೨೬ (ವೈಶಾಖ, ೨೫, ಶಕವರ್ಷ, ೧೯೪೮)<br>BENGALURU, FRIDAY, 15, MAY, 2026 ( VAISHAKHA , 25, SHAKAVARSHA, 1948) | ನಂ. ೩೮೨<br>No. 382 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 'ಬಿ' ಖಾತಾವನ್ನು 'ಎ' ಖಾತಾ ಆಗಿ ಪರಿವರ್ತಿಸಲು ಸೀಮಿತ ಅವಧಿಗೆ (100 ದಿನಗಳು) ಶುಲ್ಕವನ್ನು ಕಡಿತಗೊಳಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 272 ಎಂಎನ್‌ಜೆ 2025(ಇ), ದಿನಾಂಕ:16.07.2025.
2. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರ ಏಕ ಕಡತ ಸಂಖ್ಯೆ:JC/R/PR/70/26-27.

****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಬೆಂಗಳೂರಿನ ಪರಿಷ್ಕೃತ ಮಹಾಯೋಜನೆ 2015 ಕ್ಕೆ ತಿದ್ದುಪಡಿ ಮಾಡಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ-17 ರಲ್ಲಿನ ಅವಕಾಶದಂತೆ ಏಕ ನಿವೇಶನ ವಿನ್ಯಾಸ ಅನುಮೋದನೆಗೆ ನಿಯಮಾವಳಿಗಳನ್ನು ಅಳವಡಿಸಲಾಗಿದೆ. ಈ ನಿಯಮಾವಳಿಗಳಲ್ಲಿ 2000 ಚ.ಮೀ. ವರೆಗಿನ ಏಕ ನಿವೇಶನದ ವಿನ್ಯಾಸಗಳಿಗೆ ಅನುಮೋದನೆ ನೀಡುವಾಗ ಭೂ ಮಾಲೀಕರು ಉದ್ಯಾನವನ ಅಥವಾ ಮೇಲ್ಮೈ ವಾಹನ ನಿಲುಗಡೆಯ (Surface Parking) ಕಾಯ್ದಿರಿಸುವಿಕೆಯ ಬದಲಿಗೆ ಕರ್ನಾಟಕ ನೋಂದಣಿ ಕಾಯ್ದೆ 1957ರ ಕಲಂ-45 ರಡಿಯಲ್ಲಿ ಅಧಿಸೂಚಿಸಲಾಗುವ ಭೂ ಪರಿವರ್ತಿತ ಅಭಿವೃದ್ಧಿ ಹೊಂದದೇ ಭೂಮಿಗೆ ಅನ್ವಯಿಸುವ ಮಾರ್ಗಸೂಚಿ ಬೆಲೆಯ ಶೇಕಡ 5 ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಪಾವತಿಸಲು ನಿರ್ದಿಷ್ಟಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರಲ್ಲಿ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರಿಂದ ಸ್ವೀಕೃತವಾಗಿರುವ ಏಕ ಕಡತದ ಪ್ರಸ್ತಾವನೆಯಲ್ಲಿ 'ಬಿ' ಖಾತಾ ಪರಿವರ್ತನೆಯು ಕರ್ನಾಟಕ ಸರ್ಕಾರದ ನಾಗರಿಕ ಪರ ಉಪಕ್ರಮವಾಗಿದ್ದು, ಇದುವರೆಗೆ 'ಬಿ' ಖಾತಾದಿಂದ 'ಎ' ಖಾತಾ ಪರಿವರ್ತನೆಗೆ 12169 ಅರ್ಜಿಗಳನ್ನು ನಾಗರೀಕರಿಂದ ಸ್ವೀಕರಿಸಲಾಗಿದ್ದು, ಇದರಲ್ಲಿ ಸುಮಾರು 6000 ಅರ್ಜಿಗಳನ್ನು ಅನುಮೋದಿಸಿದ್ದರೂ ಸಹ ಕೇವಲ 1500 ಪ್ರಸ್ತಾವನೆಗಳಲ್ಲಿ ಮಾತ್ರ ಮೊತ್ತವನ್ನು ಪಾವತಿಸಲಾಗಿರುವುದಾಗಿ ತಿಳಿಸಿ, ಖಾತಾ ಪರಿವರ್ತನೆ ಪ್ರಕ್ರಿಯೆಯಲ್ಲಿ ನಾಗರೀಕರು ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ ಏಕ ನಿವೇಶನದ ವಿನ್ಯಾಸ ಅನುಮೋದನೆ ಸಂಬಂಧ ಮಾರ್ಗಸೂಚಿ ಬೆಲೆಯ ಶೇಕಡ 5 ರಷ್ಟು ಮೊತ್ತವನ್ನು ಪಾವತಿಸಬೇಕಾಗಿ ತಿಳಿಸಿರುತ್ತಾರೆ. ಸಾರ್ವಜನಿಕರು ಶೇ.5 ರಷ್ಟು ಮಾರ್ಗಸೂಚಿ ದರದ ಮೊತ್ತವು ಅತಿ ಹೆಚ್ಚಾಗಿದ್ದು, ಕಡಿಮೆಗೊಳಿಸುವಂತೆ ಕೋರಿರುವುದಾಗಿ ಮತ್ತು

ಇದರಿಂದಾಗಿ ಸಂದಾಯವಾಗಬೇಕಾಗಿದ್ದ ಸುಮಾರು ರೂ.200 ಕೋಟಿ ಮೊತ್ತವು ವಿಳಂಬವಾಗಿರುವುದಾಗಿ ತಿಳಿಸಿರುತ್ತಾರೆ.

ಇನ್ನು ಮುಂದೆ ಹೊಸ 'ಬಿ' ಖಾತಾ ನೀಡುವುದನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದ್ದು, ಈ ಹಿಂದೆ 'ಬಿ' ಖಾತಾ ಹೊಂದಿರುವ ಸುಮಾರು 7.00 ಲಕ್ಷ ಆಸ್ತಿಗಳಿದ್ದು, ಗರಿಷ್ಠ ಸಂಖ್ಯೆಯ 'ಬಿ' ಖಾತಾ ಹೊಂದಿರುವ ಆಸ್ತಿಗಳನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಮತ್ತು ಹೆಚ್ಚಿನ ಸಂಖ್ಯೆಯ ಅರ್ಜಿಗಳನ್ನು ಉತ್ತೇಜಿಸುವ ಸಲುವಾಗಿ 100 ದಿನಗಳ ಸೀಮಿತ ಅವಧಿಗೆ ಅನ್ವಯವಾಗುವಂತೆ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

1. ದಿನಾಂಕ 15.05.2026 ರಿಂದ 23.08.2026 (100 ದಿನಗಳು) ವರೆಗೆ 'ಬಿ' ಯಿಂದ 'ಎ' ಖಾತಾ ಪರಿವರ್ತನೆಗೆ ಅರ್ಜಿ ಸಲ್ಲಿಸಿರುವ ಪ್ರಕರಣಗಳಲ್ಲಿ ಮಾತ್ರ ಪಾವತಿಸಬೇಕಾದ ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ರಿಂದ ಶೇ.2 ಕ್ಕೆ ಕಡಿತಗೊಳಿಸಿ ಪಾವತಿಸಿಕೊಳ್ಳಲು.
2. ಈಗಾಗಲೇ 'ಬಿ' ಯಿಂದ 'ಎ' ಖಾತಾ ಪರಿವರ್ತನೆಗೆ ಅರ್ಜಿ ಸಲ್ಲಿಸಿ, ಮೊತ್ತ ಪಾವತಿಸದೇ ಬಾಕಿ ಉಳಿದಿರುವ ಪ್ರಕರಣಗಳಲ್ಲಿಯೂ ಸಹ ದಿನಾಂಕ 23.08.2026 ರೊಳಗಾಗಿ ಪಾವತಿಸಿದಲ್ಲಿ ಶೇ.2 ರಷ್ಟು ಮಾರ್ಗಸೂಚಿ ದರವನ್ನು ಅನ್ವಯಿಸಿ ಪಾವತಿಸಿಕೊಳ್ಳಲು.
3. ಈಗಾಗಲೇ 'ಬಿ' ಯಿಂದ 'ಎ' ಖಾತಾ ಪರಿವರ್ತನೆಗೆ ಅರ್ಜಿ ಸಲ್ಲಿಸಿ, ಅನುಮೋದನೆಯಾಗಿರುವ ಆದರೆ, ಮೊತ್ತ ಪಾವತಿಸದೇ ಇರುವ ಪ್ರಕರಣಗಳಲ್ಲಿಯೂ ಸಹ ದಿನಾಂಕ 23.08.2026 ರೊಳಗಾಗಿ ಪಾವತಿಸಿದಲ್ಲಿ ಶೇ.2 ರಷ್ಟು ಮಾರ್ಗಸೂಚಿ ದರವನ್ನು ಅನ್ವಯಿಸಿ ಪಾವತಿಸಿಕೊಳ್ಳಲು.
4. ಮೇಲ್ಕಂಡ ಕ್ರ.ಸಂ. 2 ಮತ್ತು 3 ರ ಪ್ರಕರಣಗಳಲ್ಲಿ online ವ್ಯವಸ್ಥೆ ಮುಖಾಂತರ ಪರಿಷ್ಕೃತ demand notice ನೀಡಲು.
5. ಏಕ ನಿವೇಶನ ಅನುಮೋದನೆಯಡಿಯಲ್ಲಿ ಹೊಸದಾಗಿ 'ಎ' ಖಾತಾ ನೀಡಲಾಗುವ ಪ್ರಕರಣಗಳಲ್ಲಿ, ಚಾಲ್ತಿಯಲ್ಲಿರುವ ನಿಯಮಾವಳಿಯಂತೆ ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ರಷ್ಟು ಪಾವತಿಸಿರುವುದನ್ನು ಮುಂದುವರೆಸಲು.
6. ಚಾಲ್ತಿಯಲ್ಲಿರುವ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ.
7. ಮಾರ್ಗಸೂಚಿ ಬೆಲೆಯ ಶೇ.5 ಕ್ಕೆ ಬದಲಾಗಿ ಶೇ.2 ರಷ್ಟು ದರದಲ್ಲಿ ಪಾವತಿಯ ಅವಕಾಶವು ದಿನಾಂಕ:23.08.2026ರ 11.59 p.m ನಂತರ ಅಸ್ತಿತ್ವದಲ್ಲಿರುವುದಿಲ್ಲ. ತದನಂತರ ಸ್ವೀಕೃತವಾಗುವ ಅರ್ಜಿಗಳಿಗೆ ಚಾಲ್ತಿಯಲ್ಲಿರುವ ಅಧಿಸೂಚನೆಯಂತೆ ಶೇ.5 ರಷ್ಟು ಮಾರ್ಗಸೂಚಿ ದರದಂತೆ ಮೊತ್ತ ಪಾವತಿಸಿಕೊಳ್ಳಲು.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ಸೀಮಿತ ಅವಧಿಗೆ (100 ದಿನಗಳು) ಅನ್ವಯವಾಗುವಂತೆ 'ಬಿ' ಖಾತಾ ಯಿಂದ 'ಎ' ಖಾತಾ ಪರಿವರ್ತನೆ ಪ್ರಕ್ರಿಯೆಯಲ್ಲಿ ಪಾವತಿಸಿಕೊಳ್ಳಬೇಕಾದ ಆಸ್ತಿಯ ಮಾರ್ಗಸೂಚಿ ದರದ ಶೇಕಡ 5 ಕ್ಕೆ ಬದಲಾಗಿ ಶೇಕಡ 2ಕ್ಕೆ ಕಡಿತಗೊಳಿಸಲು ಸಲ್ಲಿಸಿರುವ ಪ್ರಸ್ತಾವನೆಯು ಸೂಕ್ತವೆಂದು ಮನಗಂಡು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ನಅಇ 317 ಎಂಎನ್‌ಜೆ 2026, ಬೆಂಗಳೂರು,**
**ದಿನಾಂಕ: 14.05.2026.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಆಸ್ತಿಗಳಿಗೆ ಸೀಮಿತ ಅವಧಿಗೆ (100 ದಿನಗಳು) ಅಂದರೆ ದಿನಾಂಕ:15.05.2026 ರಿಂದ 23.08.2026 ರವರೆಗೆ ಅನ್ವಯಿಸಿ 'ಬಿ' ಖಾತಾ ಯಿಂದ 'ಎ' ಖಾತಾ ಪರಿವರ್ತನೆ ಪ್ರಕ್ರಿಯೆಯಡಿಯಲ್ಲಿ ಏಕನಿವೇಶನಗಳ ವಿನ್ಯಾಸ ಅನುಮೋದನೆ ಸಂಬಂಧ ಪಾವತಿಸಿಕೊಳ್ಳಬೇಕಾದ ಶುಲ್ಕವನ್ನು ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ಕ್ಕೆ ಬದಲಾಗಿ ಶೇ.2 ಕ್ಕೆ ಕಡಿತಗೊಳಿಸಿ ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**ನಿಬಂಧನೆಗಳು:-**

1. ದಿನಾಂಕ 15.05.2026 ರಿಂದ 23.08.2026 (100 ದಿನಗಳು) ವರೆಗೆ 'ಬಿ' ಯಿಂದ 'ಎ' ಖಾತಾ ಪರಿವರ್ತನೆಗೆ ಅರ್ಜಿ ಸಲ್ಲಿಸುವ ಪ್ರಕರಣಗಳಲ್ಲಿ ಮಾತ್ರ ಪಾವತಿಸಬೇಕಾದ ಶುಲ್ಕವನ್ನು ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ರಿಂದ ಶೇ.2 ಕ್ಕೆ ಕಡಿತಗೊಳಿಸಿ ಪಾವತಿಸಿಕೊಳ್ಳುವುದು.
2. ಈಗಾಗಲೇ 'ಬಿ' ಯಿಂದ 'ಎ' ಖಾತಾ ಪರಿವರ್ತನೆಗೆ ಅರ್ಜಿ ಸಲ್ಲಿಸಿ, ಮೊತ್ತ ಪಾವತಿಸದೇ ಬಾಕಿ ಉಳಿದಿರುವ ಪ್ರಕರಣಗಳಲ್ಲಿಯೂ ಸಹ ದಿನಾಂಕ 23.08.2026 ರೊಳಗಾಗಿ ಪಾವತಿಸಿದಲ್ಲಿ ಶೇ.2 ರಷ್ಟು ಮಾರ್ಗಸೂಚಿ ದರವನ್ನು ಅನ್ವಯಿಸಿ ಪಾವತಿಸಿಕೊಳ್ಳುವುದು.
3. ಈಗಾಗಲೇ 'ಬಿ' ಯಿಂದ 'ಎ' ಖಾತಾ ಪರಿವರ್ತನೆಗೆ ಅರ್ಜಿ ಸಲ್ಲಿಸಿ, ಅನುಮೋದನೆಯಾಗಿರುವ ಆದರೆ, ಮೊತ್ತ ಪಾವತಿಸದೇ ಇರುವ ಪ್ರಕರಣಗಳಲ್ಲಿಯೂ ಸಹ ದಿನಾಂಕ 23.08.2026 ರೊಳಗಾಗಿ ಪಾವತಿಸಿದಲ್ಲಿ ಶೇ.2 ರಷ್ಟು ಮಾರ್ಗಸೂಚಿ ದರವನ್ನು ಅನ್ವಯಿಸಿ ಪಾವತಿಸಿಕೊಳ್ಳುವುದು.
4. ಮೇಲ್ಕಂಡ ಕ್ರ.ಸಂ. 2 ಮತ್ತು 3 ರ ಪ್ರಕರಣಗಳಲ್ಲಿ online ವ್ಯವಸ್ಥೆ ಮುಖಾಂತರ ಪರಿಷ್ಕೃತ demand notice ನೀಡುವುದು.
5. ಏಕ ನಿವೇಶನ ಅನುಮೋದನೆಯಡಿಯಲ್ಲಿ ಹೊಸದಾಗಿ 'ಎ' ಖಾತಾ ನೀಡಲಾಗುವ ಪ್ರಕರಣಗಳಲ್ಲಿ , ಚಾಲ್ತಿಯಲ್ಲಿರುವ ನಿಯಮಾವಳಿಯಂತೆ ಆಸ್ತಿಯ ಮಾರ್ಗಸೂಚಿ ಬೆಲೆಯ ಶೇ.5 ರಷ್ಟು ಪಾವತಿಸುವುದನ್ನು ಮುಂದುವರೆಸುವುದು.
6. ಚಾಲ್ತಿಯಲ್ಲಿರುವ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ.
7. ಮಾರ್ಗಸೂಚಿ ಬೆಲೆಯ ಶೇ.5 ಕ್ಕೆ ಬದಲಾಗಿ ಶೇ.2 ರಷ್ಟು ದರದಲ್ಲಿ ಪಾವತಿಯ ಅವಕಾಶವು ದಿನಾಂಕ:23.08.2026ರ ನಂತರ ಅಸ್ತಿತ್ವದಲ್ಲಿರುವುದಿಲ್ಲ. ತದನಂತರ ಸ್ವೀಕೃತವಾಗುವ ಅರ್ಜಿಗಳಿಗೆ ಚಾಲ್ತಿಯಲ್ಲಿರುವ ಅಧಿಸೂಚನೆಯಂತೆ ಶೇ.5 ರಷ್ಟು ಮಾರ್ಗಸೂಚಿ ದರದಂತೆ ಮೊತ್ತ ಪಾವತಿಸಿಕೊಳ್ಳುವುದು.
8. ನಿಗದಿತ ಅವಧಿ ಮುಕ್ತಾಯಗೊಂಡ ನಂತರ ಈ ರಿಯಾಯಿತಿಯನ್ನು ನೀಡಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರವಾಗಿ ಹೊಣೆಮಾಡಿ, ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್ ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ
(ಬಿಡಿಎ & ಬೆಂ-1)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH